ಮೂಲ ಹಿಂದೀ : **ಸ್ವಾಮಿ ಬ್ರಹ್ಮೇಶಾನಂದ**

ಅನುವಾದ : **ಮಾತಾ ತ್ಯಾಗಮಯೀ**

ಜೀವನದ ಗುರಿ

ಸಾರ್ಥಕ ಜೀವನವನ್ನು ನಡೆಸಬೇಕಾದರೆ ಅದರ ಗುರಿಯನ್ನು ನಿರ್ಧರಿಸುವುದು ಅತ್ಯಂತ ಆವಶ್ಯಕ. ಹೆಚ್ಚಿನ ಜನರು ವಿದ್ಯಾಭ್ಯಾಸ, ವಿವಾಹ, ಕುಟುಂಬ ನಿರ್ವಹಣೆ ಮತ್ತು ಭೋಗ ಸುಖಗಳಲ್ಲಿ ಜೀವನವನ್ನು ಮುಗಿಸಿಬಿಡುತ್ತಾರೆ. ಇಂದ್ರಿಯಸುಖ ಭೋಗಗಳ ಆಸಕ್ತಿಯಲ್ಲೇ ಅವರು ಬಂಧಿತರಾಗುತ್ತಾರೆ. ಅವರ ಜೀವನಕ್ಕೆ ಉನ್ನತ ಗುರಿ ಇರುವುದಿಲ್ಲ. ಚಿಂತನಶೀಲನಾದ ಉಚ್ಚ ಕೋಟಿಯ ಮನುಷ್ಯ ಈ ಬಗೆಯ ಜೀವನದಿಂದ ತೃಪ್ತನಾಗುವುದಿಲ್ಲ. ಸರ್ವಗ್ರಾಹಿಯಾದ ಮೃತ್ಯು ಕ್ಷಣಕ್ಷಣವೂ ಹೊಂಚುಹಾಕುತ್ತಿದ್ದಾನೆ ಎಂಬ ಸತ್ಯ ಅವನಿಗೆ ನೆಮ್ಮದಿಯಾಗಿರಲು ಬಿಡುವುದಿಲ್ಲ. ಅವನು ಜೀವನದ ಉನ್ನತ ಅರ್ಥವನ್ನು ಅರಸುತ್ತಿರುತ್ತಾನೆ. ಬುದ್ಧ, ಕ್ರಿಸ್ತ, ಮಹಾವೀರರು ಈ ಗುಂಪಿಗೆ ಸೇರಿದವರು. ಅವರು ಮಾನವನಿಗೆ ಬದುಕನ್ನು ಸಾರ್ಥಕಗೊಳಿಸುವ ಗುರಿಯನ್ನು ತಿಳಿಯಪಡಿಸಿದ್ದಾರೆ. ಈ ಯುಗದಲ್ಲಿ ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಈ ಕಾರ್ಯವನ್ನು ಮಾಡಿರುವರು.

ಶ್ರೀರಾಮಕೃಷ್ಣರು ಹೇಳಿರುವಂತೆ ಮಾನವ ಜೀವನದ ಗುರಿ ಭಗವಂತನ ಸಾಕ್ಷಾತ್ಕಾರ. ನಾವು ಇನ್ನೊಬ್ಬರನ್ನು ಸ್ಪಷ್ಟವಾಗಿ ನೋಡುವಂತೆ, ಅವರೊಂದಿಗೆ ಮಾತನಾಡುವಂತೆ ಭಗವಂತನೊಂದಿಗೆ ಮಾತನಾಡಬಹುದು, ಅವನನ್ನು ನೋಡಬಹುದು. ಇದೇ ಮಾನವ ಜೀವನದ ಗುರಿ. ಸ್ವಾಮಿ ವಿವೇಕಾನಂದರ ಪ್ರಕಾರ ಪ್ರತಿಯೊಬ್ಬ ಜೀವಿಯೂ ದೇವನೇ ಆಗಿದ್ದಾನೆ. ಆಂತರಿಕ-ಬಾಹ್ಯ ಪ್ರಕೃತಿ ನಿಗ್ರಹದಿಂದ ಈ ದೈವತ್ವವನ್ನು ಅಭಿವ್ಯಕ್ತಿಗೊಳಿಸುವುದೇ ಮನುಷ್ಯ ಜೀವನದ ಗುರಿ. ಶ್ರೀಮಾತೆಯವರೂ ಇದೇ ಮಾನವ ಜೀವನದ ಗುರಿ ಎಂದು ಒಪ್ಪುತ್ತಾರೆ, ಜೊತೆಗೆ ವಾಸನೆಗಳನ್ನು ನಾಶಗೊಳಿಸಬೇಕು ಎಂಬ ವಿಚಾರಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ಅವರ ಪ್ರಕಾರ ನಿರ್ವಾಸನೆಯನ್ನು ಪಡೆಯುವುದೇ ಜೀವನದ ಗುರಿ ಎಂದು ಹೇಳಿದರೆ ತಪ್ಪಾಗಲಾರದು. ಪುರಾತನ ಆಚಾರ್ಯರಾದ ಬುದ್ಧ ಮತ್ತು ಯೋಗಾಚಾರ್ಯ ಪತಂಜಲಿಯ ಉಪದೇಶಗಳನ್ನು ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಬುದ್ಧನ ಪ್ರಕಾರ ದುಃಖನಿವೃತ್ತಿ ಮತ್ತು ನಿರ್ವಾಣಪ್ರಾಪ್ತಿ ಜೀವನದ ಗುರಿ. ಪತಂಜಲಿಯ ಪ್ರಕಾರ ಚಿತ್ತವೃತ್ತಿನಿರೋಧದಿಂದ ತನ್ನ ಸ್ವರೂಪದಲ್ಲಿ ಪ್ರತಿಷ್ಠಿತನಾಗುವುದು ಜೀವನದ ಗುರಿ.

ಮಹಾಪುರುಷರ ಈ ಮಾತುಗಳಲ್ಲಿ ಮೇಲ್ನೋಟಕ್ಕೆ ನಮಗೆ ವಿರೋಧವೆಂಬಂತೆ ಕಾಣುತ್ತದೆ. ಒಬ್ಬರು ಭಗವತ್ ಪ್ರಾಪ್ತಿಗೆ ಪ್ರಾಮುಖ್ಯತೆ ನೀಡಿದರೆ, ಇನ್ನೊಬ್ಬರು ದುಃಖನಿವೃತ್ತಿಗೆ, ಇನ್ನೊಬ್ಬರು ಸ್ವ-ಸ್ವರೂಪ ಅನುಸಂಧಾನಕ್ಕೆ, ಮತ್ತೊಬ್ಬರು ಚಿತ್ತವೃತ್ತಿ ನಿರೋಧಕ್ಕೆ ನೀಡುತ್ತಾರೆ. ಹಾಗಾದರೆ ಇವು ಪರಸ್ಪರ ವಿರುದ್ಧವೆ, ಅಥವಾ ಇವುಗಳಲ್ಲಿ ಪರಸ್ಪರ ಸಾಮಂಜಸ್ಯವಿದೆಯೆ? ಈ ಪ್ರಶ್ನೆ ಸೈದ್ಧಾಂತಿಕ ಹಾಗೂ ಬೌದ್ಧಿಕ ದೃಷ್ಟಿಯಿಂದ ಮಾತ್ರವಲ್ಲ, ವ್ಯಾವಹಾರಿಕ ಮತ್ತು ಸಾಧನೆಯ ದೃಷ್ಟಿಯಿಂದಲೂ ಅಷ್ಟೇ ಮಹತ್ವಪೂರ್ಣವಾದುದು.

ನಾವು ಆಳವಾಗಿ ಆಲೋಚಿಸಿದಾಗ ಮೇಲಿನ ಮಾತುಗಳಲ್ಲಿ ಯಾವ ವಿರೋಧಾಭಾಸವೂ ಇಲ್ಲ. ಒಂದೇ ತತ್ತ್ವವನ್ನು ವಿಭಿನ್ನ ದೃಷ್ಟಿಗಳಿಂದ, ಬೇರ ಬೇರೆ ರೀತಿಯಲ್ಲಿ ವ್ಯಕ್ತಪಡಿಸಲಾಗಿದೆ. ಜ್ಞಾತೃ, ಜ್ಞೇಯ ಮತ್ತು ಜ್ಞಾನದ ಸಾಧನವು ನಮ್ಮ ಮನಸ್ಸನ್ನು

ಅವಲಂಬಿಸಿದೆ. ಶ್ರೀರಾಮಕೃಷ್ಣರು ಜ್ಞೇಯವನ್ನು ಗಮನದಲ್ಲಿಟ್ಟು ಕೊಂಡು ''ಭಗವತ್ ಸಾಕ್ಷಾತ್ಕಾರ ಜೀವನದ ಗುರಿ'' ಎಂದಿರುವರು. ಇದನ್ನೇ ಸ್ವಾಮಿ ವಿವೇಕಾನಂದರು ಜ್ಞಾತಾನನ್ನು (ಅರಿಯುವ ವ್ಯಕ್ತಿಯನ್ನು) ಗಮನದಲ್ಲಿಟ್ಟುಕೊಂಡು ''ಮನುಷ್ಯನು ದೇವನೇ ಆಗಿದ್ದಾನೆ'' ಎಂದಿರುವರು. ಅದನ್ನು ಅರಿಯುವುದೇ ಜೀವನದ ಗುರಿ ಎಂದಿರುವರು. ಪತಂಜಲಿ ಮತ್ತು ಶ್ರೀಮಾತೆಯವರ ಮಾತುಗಳಲ್ಲಿ ಜ್ಞಾನದ ಮಾಧ್ಯಮವಾದ ಮನಸ್ಸಿನ ಕಡೆ ಗಮನವಿದೆ. ಈ ಮನಸ್ಸನ್ನು ಚಿತ್ತವೃತ್ತಿರಹಿತವಾಗಿಸುವುದು, ವಾಸಾನಾಶೂನ್ಯವಾಗಿಸುವುದು ತನ್ಮೂಲಕ ಮನಶುದ್ಧಿಯೇ ಜೀವನದ ಗುರಿಯಾಗಿದೆ. ಬುದ್ಧನು ಆತ್ಮತತ್ತ್ವ, ಭಗವತ್ ಸ್ವರೂಪ ಇವುಗಳ ಗೊಂದಲದಲ್ಲಿ ಸಿಲುಕದೆ, ಸ್ಪಷ್ಟವಾಗಿ, ಸರಳ ಭಾಷೆಯಲ್ಲಿ ಎಲ್ಲರೂ ಎದುರಿಸುತ್ತಿರುವ ಸಮಸ್ಯೆಯಾದ ದುಃಖವನ್ನು ನಾಶಮಾಡುವುದೇ ಜೀವನದ ಗುರಿ ಎಂದಿರುವನು. ಅವನದು ವ್ಯಾವಹಾರಿಕ ದೃಷ್ಟಿಕೋನ. ವ್ಯಕ್ತಿ ತನ್ನ ತನ್ನ ಅಭಿರುಚಿಗೆ ತಕ್ಕಂತೆ ಯಾವ ಗುರಿಯನ್ನಾದರೂ ಆಯ್ಕೆ ಮಾಡಬಹುದು.

ಚಿತ್ತವೃತ್ತಿನಿರೋಧವಾದಾಗ ನಾನು ನನ್ನ ದೈವತ್ವವನ್ನು ಅಭಿವ್ಯಕ್ತಗೊಳಿಸಿರುತ್ತೇನೇನು? ದೈವತ್ವದ ಅಭಿವ್ಯಕ್ತಿ ಮತ್ತು ಸಾಕ್ಷಾತ್ಕಾರ ಇವುಗಳಲ್ಲಿ ಪರಸ್ಪರ ಸಂಬಂಧವಿದೆಯೇನು? ದುಃಖನಿವೃತ್ತಿರೂಪವಾದ ನಿರ್ವಾಣಕ್ಕೂ, ಭಗವತ್ ಸಾಕ್ಷಾತ್ಕಾರಕ್ಕೂ ಇರುವ ಸಂಬಂಧವೇನು? ಇವೆಲ್ಲ ಒಂದೇ ಪರಮಸತ್ಯವನ್ನು ಹೇಳುವ ಭಿನ್ನ ಭಿನ್ನ ಬಗೆಯಾದರೆ, ಇವುಗಳಲ್ಲಿ ಪರಸ್ಪರ ಯಾವ ವ್ಯತ್ಯಾಸವೂ ಇಲ್ಲವೆಂದರ್ಥ. ಚಿತ್ತವೃತ್ತಿಗಳು ನಿರೋಧವಾಗದೆ, ಮನಸ್ಸು ವಾಸನಾರಹಿತವಾಗದೆ ಸಾಕ್ಷಾತ್ಕಾರವಿಲ್ಲ. ಸಾಕ್ಷಾತ್ಕಾರವಿಲ್ಲದೆ ದುಃಖನಿವೃತ್ತಿಯೂ ಇಲ್ಲ. ತನ್ನೊಳಗಿನ ದೈವತ್ವವನ್ನು ಅಭಿವ್ಯಕ್ತಗೊಳಿಸುವುದು ಮತ್ತು ನಿರ್ವಾಣ ಎರಡೂ ಒಂದೇ ಆಗಿದೆ. ಆತ್ಮಸ್ವರೂಪವನ್ನು ಅರಿಯುವುದೆಂದರೂ ಒಂದೇ, ಭಗವತ್ ಸಾಕ್ಷಾತ್ಕಾರವೆಂದರೂ ಒಂದೇ. ಹೀಗೆ ಈ ಎಲ್ಲಾ ವಾಣಿಗಳು ಪರಸ್ಪರ ಸಂಬಂಧವನ್ನು ಹೊಂದಿವೆ. ಇವು ಒಂದು ಇನ್ನೊಂದಕ್ಕೆ ಪೂರಕಗಳೇ ಹೊರತು ವಿರುದ್ಧವಲ್ಲ. ಸಾಧಕನು ಈ ಸತ್ಯವನ್ನು ಗುರಿಯನ್ನು ತಲುಪಿದಾಗ ಸರಿಯಾಗಿ ಅರ್ಥಮಾಡಿಕೊಳ್ಳುತ್ತಾನೆ. ಆ ಸ್ಥಿತಿಯನ್ನು ತಲುಪುವುದಕ್ಕೆ ಮೊದಲೇ ಅವನು ತನ್ನ ಸಾಧನಾ ಜೀವನದಲ್ಲೇ ಇದನ್ನು ಅರ್ಥಮಾಡಿಕೊಳ್ಳಲೂ ಬಲ್ಲನು.

ವಿಚಾರಪ್ರಧಾನ ಸ್ವಭಾವವುಳ್ಳ ಸಾಧಕನು, ಅಂತರಾಳದಲ್ಲಿರುವ ಬ್ರಹ್ಮನ ಅಭಿವ್ಯಕ್ತಿಯನ್ನು ಜೀವನದ ಗುರಿ ಎಂದು ಬಗೆದು ಜ್ಞಾನಮಾರ್ಗದಿಂದ ಎಂದರೆ ಆತ್ಮಾನಾತ್ಮವಿವೇಕ ವಿಚಾರದ ದಾರಿಯಿಂದ ಮುಂದುವರಿಯುತ್ತಾನೆ. ಮೊದಮೊದಲು ಅವನಲ್ಲಿ ದೇಹಾತ್ಮಬುದ್ಧಿ ಬಲವಾಗಿರುತ್ತದೆ. ಅವನು ತನ್ನನ್ನು ತಾನು ದೇಹವೆಂದು ಬಗೆಯುತ್ತಾನೆ. ಅವನ ಮನಸ್ಸು ಇನ್ನೂ ಚಂಚಲವಾಗಿರುತ್ತದೆ, ದೃಶ್ಯ ಜಗತ್ತು ಅವನಿಗೆ ಸತ್ಯವಾಗಿರುತ್ತದೆ. ಸಾಧನೆಯ ಪರಿಣಾಮವಾಗಿ ಅವನಿಗೆ ತಾನು ರಕ್ತಮಾಂಸದ ಮುದ್ದೆ ಅಲ್ಲ, ಅದಕ್ಕಿಂತ ಪ್ರತ್ಯೇಕವಾಗಿರುವ ಚೈತನ್ಯ, ಸದ್ವಸ್ತು ಎಂಬ ಅರಿವು ಕ್ರಮೇಣ ಉದಿಸುತ್ತದೆ. ಆಗ ಅವನು ಮೊದಲಿಗಿಂತ ಹೆಚ್ಚು ಶಾಂತವಾಗುತ್ತಾನೆ. ಬಾಹ್ಯಜಗತ್ತು ಎಷ್ಟು ಸತ್ಯವೆಂದು ತಾನು ತಿಳಿದಿದ್ದೆನೋ ಅಷ್ಟು ದಿಟವಲ್ಲ, ಅದರ ಹಿಂದೆ ಒಂದು ಸತ್ ವಸ್ತು, ಚೈತನ್ಯ ವಸ್ತು ಇದೆ ಎಂದೂ ಅವನಿಗೆ ಅನ್ನಿಸತೊಡಗುತ್ತದೆ. ಇನ್ನೂ ಮುಂದುವರಿದಂತೆ ಆತ್ಮನು ದೇಹ-ಮನದಿಂದ ಪ್ರತ್ಯೇಕ ಎಂದು ಗೊತ್ತಾಗುತ್ತದೆ. ಜಗತ್ತು ಸ್ವಪ್ನವತ್ ಎಂದು ಗೊತ್ತಾಗುತ್ತದೆ. ವಿವೇಕ-ವಿಚಾರದಿಂದ ಆತ್ಮದ ಸ್ವಾನುಭವವಾದಾಗ ಅವನಿಗೆ ಜಗತ್ತೂ ಬ್ರಹ್ಮಮಯವಾಗಿ ಗೋಚರಿಸುತ್ತದೆ. ಆಗ ಅವನ ಮನಸ್ಸು ಶಾಂತವಾಗುತ್ತದೆ.

ರಾಜಯೋಗಿಯ ಧಾರಣ-ಧ್ಯಾನದಿಂದ ಚಿತ್ತವನ್ನು ಏಕಾಗ್ರಗೊಳಿಸುತ್ತ ಗುರಿಯ ಕಡೆಗೆ ಹೆಜ್ಜೆಯಿಡುತ್ತಾನೆ. ಅವನು ಚಿತ್ತವೃತ್ತಿಗಳನ್ನು ನಿರೋಧಗೊಳಿಸಿದಷ್ಟೂ ಅವನ ಮನಸ್ಸು ಹೆಚ್ಚೆಚ್ಚು ಶಾಂತವಾಗುತ್ತದೆ, ಜಗತ್ತು ಸ್ವಪ್ನವಾಗಿ ಗೋಚರಿಸುತ್ತದೆ. ಮತ್ತು ತಾನು ಆತ್ಮ ಎಂಬ ಅರಿವೂ ಉಂಟಾಗುತ್ತದೆ.

ಭಕ್ತನಾದವನು ಅವನ ನಾಮಗುಣಕೀರ್ತನೆ ಮಾಡುತ್ತ, ತಾನು ಭಗವದಭಿಮುಖನಾದಷ್ಟೂ ತನ್ನ ಮನಸ್ಸು ಶಾಂತವಾಗುವುದನ್ನು ಗಮನಿಸುತ್ತಾನೆ. ಆಗ ಅವನ ದೇಹಾಧ್ಯಾಸವೂ ಕಡಿಮೆಯಾಗುತ್ತದೆ.

ಈ ಮೂರು ಸಾಧಕರು ತಮ್ಮ ಮಾರ್ಗದಲ್ಲಿ ಮುಂದುವರಿದಂತೆ ಅವರ ದುಃಖಗಳು ಕಡಿಮೆಯಾಗುತ್ತವೆ. ಸಾಧನೆಯಲ್ಲಿ ನಿರತನಾದ ಕೆಲವು ವರ್ಷಗಳಲ್ಲಿ ಸಾಧಕ ಈ ಎಲ್ಲ ಮಾರ್ಗಗಳ ಸಮನ್ವಯವನ್ನು ಮನಗಾಣುತ್ತಾನೆ. ಎಲ್ಲ ಗುರಿಗಳ ಸಮಾನತೆಯನ್ನು ಅನುಭವದಿಂದ ಅರಿಯುತ್ತಾನೆ. ಇಲ್ಲಿ ನಾವು ಇನ್ನೊಂದು ನಿಷ್ಕರ್ಷೆಯನ್ನು ಮಾಡಬಹುದು. ಭಕ್ತಿಯಿಂದ ನನ್ನ ಚಿತ್ತವೃತ್ತಿಗಳು ನಿರೋಧವಾಗುತ್ತವೆ ಎನ್ನುವುದಾದರೆ ಧ್ಯಾನ ಅಭ್ಯಾಸದಿಂದ ನನ್ನ ಭಗವತ್ಪ್ರೇಮವೂ ವೃದ್ಧಿಯಾಗಬೇಕಲ್ಲವೆ? ಅಥವಾ ನಾನು ಭಕ್ತಿಸಾಧನೆಯನ್ನೇ ಪ್ರಧಾನವಾಗಿ ಮಾಡುತ್ತಿದ್ದರೂ ಜೊತೆಯಲ್ಲಿ ವಿಚಾರಬುದ್ಧಿಯಿಂದ ಆತ್ಮಸ್ವರೂಪವನ್ನು ಚಿಂತನೆ ಮಾಡುವುದಾದರೆ ನನ್ನ ಭಕ್ತಿ ಪರಿಪುಷ್ಟವಾಗುತ್ತದಲ್ಲವೆ? ಇದೇ ರೀತಿ ಜ್ಞಾನಯೋಗಿ ಸಾಧಕನು ಆತ್ಮ ಅನಾತ್ಮ ವಿವೇಕ-ವಿಚಾರದೊಂದಿಗೆ ಚಿತ್ತವೃತ್ತಿನಿರೋಧಕ್ಕಾಗಿಯೂ ಪ್ರಯತ್ನಿಸಬಹುದು, ಭಗವತ್ಪ್ರೇಮಕ್ಕಾಗಿಯೂ ಯತ್ನಿಸಬಹುದು. ಆಗ ಅವನು ವೇಗವಾಗಿ ತನ್ನ ಗುರಿಯೆಡೆಗೆ ಹೆಜ್ಜೆಯಿಡಬಹುದು. ನಮ್ಮ ಜೀವನದ ಗುರಿ ಸಾಧನೆಗೆ ಜ್ಞಾನ, ಭಕ್ತಿ, ಧ್ಯಾನ, ಕರ್ಮ — ಯಾವ ಮಾರ್ಗವನ್ನಾದರೂ ಅನುಸರಿಸಬಹುದು. ಆದರೆ ಈ ನಾಲ್ಕು ಮಾರ್ಗಗಳ ಸಮನ್ವಯವು ಶ್ರೇಷ್ಠವಾದುದು, ಏಕೆಂದರೆ ಅದರಿಂದ ನಮ್ಮ ಬುದ್ಧಿ, ಭಾವನೆ, ಕ್ರಿಯಾಶಕ್ತಿಗಳು ಪೂರ್ಣವಾಗಿ ಬಳಕೆಯಾಗುತ್ತವೆ.